327

ಅಂಚೇ ಇಲಾಖಾ.

ನಂ. 77—47. ತಾರೀಖು 13ನೇ ಮೇ 1884.

ಇದರಿಂದ ಸಕಲಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳಿ ಅಂಚೆ ಆಫೀಸ್‌ಗಳು ಸ್ಥಾಪಿಸಲ್ಪಟ್ಟಿರುತ್ತವೆ:—

ತಾಲ್ಲೂಕು.	ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ಆನೆಕಲ್	ದೊಮ್ಮಸಂದ್ರ.
ನಂಜನಗೂಡು	ಹುಲ್ಲಹಳ್ಳಿ.

ಬಿ. ಮರಿಗಂಗಯ್ಯ,
ಅಂಚೇ ಬಕ್ಷಿ.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 8ನೇ ಮೇ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿಕ್ಕಬಳ್ಳಾಪುರದ ಟರ್ನಲ್ಲಿರುವ ಹಳೇ ತಾಲ್ಲೂಕು ಕಛೇರಿ ಕಟ್ಟಡ ನಿವೇಶನ ಸಹಿತ ಸ್ಯ॥ 1884ನೇ ಇಸವಿ ಜೂನ್ ತಾರೀಖು 2ನೇ ದಿವಿ 11 ಘಂಟೆಗೆ ಆ ತಾಲ್ಲೂಕು ಅಮಲ್ದಾರ್‌ವರ ರೂಬರೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಯಿಚ್ಛೈನುಳ್ಳವರು ಆ ಕಾಲಕ್ಕೆ ಸರಿಯಾಗಿ ಹಾಜರಾಗಿ ಧಾರಾಳವಾಗಿ ಸವಾಲ್ ಮಾಡಬಹುದು, ಹರಾಜು ಕೈದಾದ ಮೇಲೆ ಬರುವ ಸವಾಲ್ ಮಂಜೂರ್ ಮಾಡಲ್ಪಡುವದಿಲ್ಲ.

2. ಈ ಹರಾಜು ದೀರ್ವಾ ಸಾಹೆಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

3. ಹರಾಜು ಕೈದಾದ ವಡನೆ ಚಡ ಸವಾಲ್‌ದಾರನು ಅವನ ಸವಾಲ್ ಮೊಬಲಗು ಪೈಕೀ 4ರಲ್ಲಿ ವಂದು ಹಿಸ್ಸೆ ಪೇವಣಿ ಯಿಡಬೇಕು, ಯಿಡುವದಕ್ಕೆ ತಪ್ಪಿದರೆ ದುಸರಾ ಹರಾಜು ಹಾಕಿಸಲ್ಪಡುತ್ತೆ, ಕಮ್ಮಿ ಬಿದ್ದ ಮೊಬಲಗು ಚಡ ಸವಾಲ್‌ದಾರನ ಜಿಂದಗಿ ಯಿಂದ ರೆವಿನ್ಯೂ ಕಂದಾಯದ ಬಾಕೀಯ್ತಂತೆ ವಸೂಲ್ಮಾಡಲ್ಪಡುವದು, ಆ ಹರಾಜಿನಲ್ಲಿ ಜಾಸ್ತೀ ಹುಟ್ಟಿದರೆ ಚಡ ಸವಾಲ್‌ದಾರನಿಗೆ ಜಾಸ್ತೀ ಮೊಬಲಗ್ಯೆ ಹಕ್ಕು ಯಿಲ್ಲಾ, ಹರಾಜು ದೀರ್ವಾ ಸಾಹೆಬರವರಿಂದ ಮಂಜೂರ್ ಮಾಡಲ್ಪಟ್ಟ ಸಂಗತಿಯನ್ನ ಬರವಣಿಗೆ ಮೂಲಕವಾಗಿ ಚಡ ಸವಾಲ್‌ದಾರನಿಗೆ ತಿಳಿಸಿದ 3 ದಿವಸಗಳ ವಳಗಾಗಿ ಅವನು ಬಾಕೀ ಮೊಬಲಗನ್ನು ಮತ್ತು ಚಡ ಸವಾಲ್ ಮೊಬಲಗ್ಯೆ ರೂಪಾಯಿ 1ಕ್ಕೆ 1ಆಣೆ ಮೇರಿಗೆ ಲೋಕಲ್ ಸೆಸ್ ಸಹ ಪಾವತೀ ಮಾಡಿ ಕಟ್ಟಡ ಸ್ವಾಧೀನಕ್ಕೆ ಪಡಿಯಬೇಕು, ಬಾಕೀ ಹಣ ಲೊಕಲ್ ಸೆಸ್ ಸಹಾ ಕೊಡುವದಕ್ಕೆ ತಪ್ಪಿದರೆ ಪೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಪುನಃ ಹರಾಜು ಹಾಕಿಸಿ ಲುಕಸರ್ನ ಮೊಬಲಗನ್ನು ತಪ್ಪಿದ ಚಡ ಸವಾಲ್‌ದಾರನಿಂದ ರೆವಿನ್ಯು ಕಂದಾಯದಂತೆ ವಸೂಲ್ಮಾಡಲಾಧೀತು.

ಜೆ. ರಘುನಾಥರಾವ್,
ಫಾರ್ ಡೆ॥ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 13ನೇ ಮೇ 1884.

ತುಮಕೂರು ಡಿಸ್ಟ್ರಿಕ್ಟು ಮಾಜಸ್ಟ್ರೇಟರವರು, ಇದರಡೀಕಂಡ ಮಾಜಿಸ್ಟ್ರೇಟ್‌ಗಳಿಗೆ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 23ನೇ (ಬಿ) ಸೆಕ್ಷನ್ ಅನುಸರಿಸಿ ಈ ಕೆಳಗೆ ಕಂಡ ಜಾಸ್ತೀ ಅಧಿಕಾರಗಳು ಕೊಟ್ಟಿರುತ್ತಾರೆ:—